


ಮಾಡುತ್ತಾ ಎಮ್ಮೆ ಎಂಬ ಸೌಜನ್ಯಮೂರ್ತಿಯನ್ನು ಕಡೆಗಣಿಸಲಾಗುತ್ತಿದೆಯಲ್ಲವೇ.

ಇನ್ನು ದನಕ್ಕೆ ಹೋಲಿಸಿದರೆ ಎಮ್ಮೆಯ ತೂಕ ಯಾವುದರಲ್ಲೂ ಕಡಿಮೆಯೇನಿಲ್ಲ. ಹಸು ನೀಡುವುದು ಬೆಳ್ಳಗಿನ ಹಾಲಾದರೆ, ಎಮ್ಮೆ ನೀಡುವುದು ಕೂಡ ಬೆಳ್ಳಗಿನ ಹಾಲೇ ಹೊರತು ಕಪ್ಪಗಿನ ಹಾಲಲ್ಲ. ನಾಯಿಯ ಮೊಲೆಯಲ್ಲಿ ಹಾಲಿದ್ದರೂ ಅದರಿಂದ ಮನುಷ್ಯನಿಗೆ ಏನೂ ಪ್ರಯೋಜನವಿಲ್ಲ, ಆದರೆ ಎಮ್ಮೆಯ ಮೊಲೆಯಲ್ಲಿ ಹಾಲಿದ್ದರೆ ಅದರ ಕರುವಿಗೂ ಬಿಡದಷ್ಟು ಸಂಪೂರ್ಣವಾಗಿ ಅದರ ಹಾಲನ್ನು ಮನೆಮಂದಿಯೆಲ್ಲ ಹೀರುವುದು ಸುಳ್ಳೇನಲ್ಲ.

ನನಗಂತೂ ಆಕಳ ಹಾಲಿನ ತುಪ್ಪಕ್ಕಿಂತ ಎಮ್ಮೆ ಹಾಲಿನ ದಪ್ಪ ತುಪ್ಪ ಇನ್ನೂ ಹೆಚ್ಚಿನ ರುಚಿ. ಆಕಳ ತುಪ್ಪಕ್ಕಿಂತಲೂ ಎಮ್ಮೆಯ ತುಪ್ಪ ಬಲು ದುಬಾರಿ. ಆದರೆ ಏನೇ ಆಗಲಿ... ಸಾಲ ಮಾಡಿಯಾದರೂ ಎಮ್ಮೆ ತುಪ್ಪ ತಿನ್ನಲೇಬೇಕು ಎಂಬ ಆಸೆ ಎಮ್ಮೆ ಪ್ರಿಯರಿಗಿದ್ದರೆ ಅದೇನು ದೊಡ್ಡ ತಪ್ಪಲ್ಲ. ಬಹುಶಃ ಎಮ್ಮೆ ಚರ್ಮದಂತೆ ನನ್ನ ಚರ್ಮವೂ ದಪ್ಪವಾಗಿರುವುದರಿಂದ ಎಮ್ಮೆ ತುಪ್ಪವೇ ನನಗೆ ಹೆಚ್ಚು ಇಷ್ಟವಾಗಿರಲಿಕ್ಕೂ ಸಾಕು ಎಂದು ನನ್ನ ಹೆಂಡತಿ ಆಗಾಗ ಕಿಚಾಯಿಸುತ್ತಿದ್ದುದೂ ಉಂಟು.

ನಾವು ಎಮ್ಮೆಯನ್ನು ಸಾಕುತ್ತೇವೆ ಎಂಬ ಭ್ರಮೆಯಲ್ಲಿದ್ದೇವೆ. ವಾಸ್ತವವಾಗಿ ನಮ್ಮನ್ನು ಈ ಎಮ್ಮೆಯೇ ಸಾಕುತ್ತಿದೆ ಎಂದರೆ ತಪ್ಪಾಗಲಾರದು. ಕಾರಣ ಎಮ್ಮೆ ಬದುಕಿದ್ದಾಗ ಹಾಲು ಕೊಡುತ್ತ ನಮ್ಮ ಆಹಾರಕ್ಕೆ, ಆದಾಯಕ್ಕೆ ಆಧಾರವಾಗುತ್ತದೆ. ಎಷ್ಟೋ ಹಳ್ಳಿಗಳಲ್ಲಂತೂ ಎಮ್ಮೆ ಸಾಕಿಯೇ ತಮ್ಮ ಜೀವನ ನಿರ್ವಹಿಸಿಕೊಳ್ಳುತ್ತಿರುವ ಕುಟುಂಬಗಳಿವೆ. ಎಮ್ಮೆಯನ್ನೇ ನಂಬಿಕೊಂಡು ಹುಟ್ಟಿಕೊಂಡ ಹಾಲು ಮಾರಾಟ ಸಂಘಗಳ ಮೂಲಕ ಇತ್ತೀಚೆಗಂತೂ ಅನೇಕರಿಗೆ ಉದ್ಯೋಗ ಸಿಕ್ಕಿದೆ. ಈಗಂತೂ ಹತ್ತು ಎಮ್ಮೆ ಸಾಕಿಕೊಂಡವನು ಸಾಫ್ಟ್‌ವೇರ್ ಎಂಜಿನಿಯರನ ಸಂಬಳಕ್ಕಿಂತ ಕಡಿಮೆಯೇನೂ ದುಡಿಯುವುದಿಲ್ಲ. ಅಷ್ಟೊಂದು ಬೆಲೆ ಬಂದಿದೆ ಈ ಎಮ್ಮೆಯ ಹಾಲಿಗೆ.

ಹಾಗಂತ ಎಮ್ಮೆ ಸಾಕಲು ಯಾವುದೇ ರೀತಿಯ ಎಂಎ ಅಥವಾ ಬಿಎ, ಬಿಎಸ್ಸಿ ಡಿಗ್ರಿ ಏನನ್ನೂ ಮಾಡಬೇಕಾಗಿಲ್ಲ. ಎಮ್ಮೆ ಕಾಯುವ ಅಥವಾ ಸಗಣಿ ಬಾಚುವ ಕೆಲಸ ಗೊತ್ತಿದ್ದರೆ ಸಾಕು, ಎಮ್ಮೆಯ ಸಾಕುಪುತ್ರನಾಗಬಹುದು.

ಎಮ್ಮೆ ಸತ್ತಾಗ ಎಮ್ಮೆ ಚರ್ಮದಿಂದ ಚಪ್ಪಲಿಯನ್ನು, ಬೆಲ್ಟನ್ನು, ಮತ್ತಿತರ ಉಪಯುಕ್ತ ವಸ್ತುಗಳನ್ನು ತಯಾರಿಸಲಾಗುತ್ತದೆ. ಕಾರಿನ ಸ್ಟೇರಿಂಗಿನಂತೆ ಅಥವಾ ಸುದರ್ಶನ ಚಕ್ರದಂತಿರುವ ಎಮ್ಮೆಯ ಕೋಡುಗಳಿಂದ ಮಕ್ಕಳ ಆಟಿಕೆಗಳನ್ನು, ಮತ್ತಿತರ ಸೌಂದರ್ಯ ಸಾಧನಗಳನ್ನು, ಪುಟ್ಟ ಪೀಠೋಪಕರಣಗಳನ್ನು ಮಾಡುವ ಉದ್ಯಮಗಳಿವೆ. ಕೋಡುಬಳೆಯಂತೆ ತುಂಬಾ ಆಕರ್ಷಕವಾಗಿರುವ ಎಮ್ಮೆಯ ಕೋಡುಗಳು ಆಫ್ರಿಕಾದಲ್ಲಿ ತುಂಬಾ ಬೆಲೆ ಬಾಳುತ್ತವೆಯಂತೆ. ಸತ್ತ ಎಮ್ಮೆಯ ಮಾಂಸವನ್ನು ಕೇವಲ ಹದ್ದಲ್ಲ, ಕೆಲವು ದೇಶಗಳಲ್ಲಿ ಮನುಷ್ಯರೂ ಚಪ್ಪರಿಸಿ ತಿನ್ನುತ್ತಾರೆ. ಹೀಗೆ ಬದುಕಿದ್ದಾಗಲೂ ಎಮ್ಮೆ ಮಾನವನಿಗೆ ಉಪಕಾರಿ. ಸತ್ತ ಮೇಲೆಯೂ ಮನುಷ್ಯನಿಗೆ ಹಿತಕಾರಿ. ಆದರೆ ಮಾನವ ಸ್ವಂತ ಮಾವನಿಗೂ ಕೂಡ ಎಷ್ಟೋ ಬಾರಿ ಉಪಕಾರಿಯಾಗುವುದಿಲ್ಲ. ಹೀಗಾಗಿ... ನೀನಾರಿಗಾದೆಯೋ ಎಲೆ ಮಾನವ ಎಂದು ಎಮ್ಮೆ ನಮ್ಮನ್ನು ಕೇಳಿದರೆ ನಾವು ನಿರುತ್ತರರಾಗಬೇಕಾದೀತು.

ಎಮ್ಮೆಯ ಈ ರೀತಿಯ ಎಷ್ಟೋ ಉದಾತ್ತ ಗುಣಗಳಿಂದಾಗಿಯೇ ವರನಟ ಡಾ. ರಾಜಕುಮಾರ್ ಅವರು ಸಂಪತ್ತಿಗೆ ಸವಾಲು ಚಲನಚಿತ್ರದಲ್ಲಿ ಯಾರೇ ಕೂಗಾಡಲಿ.. ಊರೇ ಹೋರಾಡಲಿ, ಎಮ್ಮೆ ನಿನಗೆ ಸಾಟಿ ಇಲ್ಲ... ಎಂದು ಹಾಡಿದ್ದಷ್ಟೇ ಅಲ್ಲ, ಎಮ್ಮೆ ಸವಾರಿಯನ್ನೂ ಹೆಮ್ಮೆಯಿಂದ ಮಾಡಿದ್ದನ್ನು ನಾವು ನೋಡಿದ್ದೇವೆ. ವಿಚಿತ್ರವೆಂದರೆ ನಮ್ಮ ಮಲೆನಾಡಿನ ಹಳ್ಳಿಗಳಿಗೆ ಬಯಲು ಸೀಮೆಯ ಕಡೆಗಳಿಂದಲೇ ಎಮ್ಮೆಗಳನ್ನು ಕರೆತರುತ್ತಿದ್ದರು. ಧಾರವಾಡದ ಎಮ್ಮೆಗಳಂತೂ ನಂಬರ್ ವನ್. ಬಹುಶಃ ಧಾರವಾಡದ ಎಮ್ಮಿಕೇರಿಗೆ ಆ ಹೆಸರು ಬಂದಿರುವುದೇ ಈ ಎಮ್ಮೆಗಳಿಂದಾಗಿಯೇ ಇರಬೇಕು.

ಹುಬ್ಬಳ್ಳಿ, ಧಾರವಾಡ ಕಡೆಯ, ಅದರಲ್ಲಿಯೂ ಅಕ್ಕಿ ಆಲೂರು, ಸವಣೂರು, ಹಾನಗಲ್ ಕಡೆಗಳಿಂದ ಎಮ್ಮೆಗಳನ್ನು ಖರೀದಿಸಿ ಅವುಗಳನ್ನು ಮೊದಲ ಬಾರಿಗೆ ನಮ್ಮ ಕೊಟ್ಟಿಗೆಗೆ ಕರೆ ತಂದಾಗ ಮಂತ್ರಿಗಳಿಗೆ ಹಾರ ತುರಾಯಿ ಹಾಕಿ ಸ್ವಾಗತಿಸುವಂತೆ, ಎಮ್ಮೆಗಳಿಗೆ ಒನಕೆಯನ್ನು ಅಡ್ಡ ಇಟ್ಟು, ತಿಲಕವಿಟ್ಟು ಆರತಿ ಎತ್ತಿ ಸ್ವಾಗತಿಸಲಾಗುತ್ತಿತ್ತು.

ಎಮ್ಮೆಗಳಲ್ಲಿ ನೋಡಲು ಸೈತಾನನಂತೆ ಕಾಣುವ ಸೊರಟಿ ಮತ್ತು ಮುರಾ ಜಾತಿಯ ಎಮ್ಮೆಗಳಿಗೆ ಆಗ ಬೇಡಿಕೆ ಹೆಚ್ಚಿರುತ್ತಿತ್ತು. ಹುಟ್ಟಿಸಿದ ದೇವರು ಹುಲ್ಲು ಮೇಯಿಸದೇ ಇರಲಾರ ಎಂಬ ನಂಬಿಕೆಯಿಂದ ಎಲ್ಲೋ ಹುಟ್ಟಿದ ಈ ಎಮ್ಮೆಗಳು ನಮ್ಮೂರಿಗೆ ಮುಗ್ಧವಾಗಿ ಬಂದು, ಹೊಸ ಸೊಸೆ ಮಾವನ ಮನೆಗೆ ಹೊಂದಿಕೊಳ್ಳುವಂತೆ, ನಮ್ಮ ಅವಿಭಕ್ತ ಕುಟುಂಬಕ್ಕೆ ಹೊಂದಿಕೊಂಡು ಖುಷಿಯಿಂದ ಬದುಕುತ್ತಿದ್ದವು. ನಾವು ಮಜ್ಜಿಗೆ ಕುಡಿದಂತೆ ಎಮ್ಮೆಗಳು ಕಲಗಚ್ಚನ್ನು ಅತ್ಯಂತ ಸಂತೋಷದಿಂದ ಕುಡಿದು ಸಮರಸವೇ ಜೀವನ ಎಂಬ ಜೀವನ ಸಂದೇಶ ನೀಡುತ್ತಿದ್ದವು.

ಬೆಳಿಗ್ಗೆ ಮತ್ತು ಸಂಜೆ ಎಮ್ಮೆ ಕರೆಯುವುದೇ (ಎಮ್ಮೆಯ ಹಾಲು ಹಿಂಡುವುದೇ) ನನ್ನ ಆಯಿ ಅಥವಾ ಅಜ್ಜಿಯ ಕೆಲಸವಾಗುತ್ತಿತ್ತು. ಕೆಲವೊಮ್ಮೆ ಅವರು ಇಲ್ಲದಿರುವಾಡಗ ಗಂಡಸರೇ ಏನಾದರೂ ಹೋಗಿ ಎಮ್ಮೆಯ ಕೆಚ್ಚಲಿಗೆ ಕೈ ಹಾಕಿದರೆ, ಅವರಿಗೆ ಸರಿಯಾಗಿ ಒದ್ದು ತಕ್ಕ ಪಾಠ ಕಲಿಸುತ್ತಿತ್ತು. ಹೀಗಾಗಿ ಎಮ್ಮೆಯಿಂದ ಒದೆ ತಿಂದ ಅವರಿಗೆ ಹಾಲು ಕರೆಯುವುದೇ ಕೋಲಾಹಲಹಾಲಿನ ಅನುಭವವೇ ಹಾಲಾಹಲ ಎಂಬಂತೆ ಎಂದು ಅನ್ನಿಸಿದ್ದರೂ ಆಶ್ಚರ್ಯವಿಲ್ಲ. ಕೆಲವೊಮ್ಮೆ ನಮ್ಮಲ್ಲಿಯ ಕೆಲವು ಗಂಡಸರು ತಮಗೆ ಹಾಲು ಕರೆಯುವ ಅನಿವಾರ್ಯ ಎದುರಾದಾಗ ಸೀರೆ ಉಟ್ಟುಕೊಂಡು, ತಲೆಗೆ ಸೆರಗು ಮುಚ್ಚಿಕೊಂಡು ಹೆಂಗಸರಂತೆ ವೇಷ ಹಾಕಿ ಎಮ್ಮೆಗೇ ಯಾಮಾರಿಸುತ್ತಿದ್ದ ಘಟನೆಗಳು ನಡೆಯುತ್ತಿದ್ದವು. ಅಂತಹ ಸಂದರ್ಭಗಳಲ್ಲಿ ಆ ಗಂಡಸರನ್ನು ನೋಡುವಾಗ, ಯಕ್ಷಗಾನ ಅಥವಾ ನಾಟಕಗಳಲ್ಲಿ ಗಂಡಸರು ಹೆಂಗಸರ ಪಾತ್ರಗಳನ್ನು/ ಹೆಂಗಸರ ವೇಷಗಳನ್ನು ಹಾಕಿಕೊಂಡು ರಂಗಸ್ಥಳಕ್ಕೆ ಬಂದಂಥ ನೆನಪುಗಳು ಉಕ್ಕಿ ಬರುತ್ತಿದ್ದವು.

ಹೀಗೆ ಎಮ್ಮೆಗೇ ಟೋಪಿ ಹಾಕಿ ಹಾಲು ಕರೆಯಲು ಇವರು ಕೊಟ್ಟಿಗೆಯಲ್ಲಿ ಪ್ರತ್ಯಕ್ಷರಾದಾಗ ನಮ್ಮ ತುಂಟ ನಗೆ ಅವರನ್ನು ಮತ್ತಷ್ಟು ಕೆರಳಿಸುತ್ತಿತ್ತು. ಇತ್ತೀಚೆಗೆ ಎಮ್ಮೆ ಕರೆಯುವುದಕ್ಕೂ